ಅಧ್ಯಕ್ಷರು : ನೀವು ಕೇಳಿರುವ ಪ್ರಶ್ನೆಗೆ ಸೀಮಿತ ಮಾಡಿ, ಉತ್ತರದಲ್ಲಿ ಸಮಿತಿ ಬಗ್ಗೆ ಯೋಜನೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಕೆರೆಗಳ ಮತ್ತು ನೀರಿನ ನಿರ್ವಹಣೆಗೆ ಕೆರೆ ಅಭಿವೃದ್ಧಿ ಪ್ರಾಧಿಕಾರ ಜಾರಿಗೆ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಆ ರೀತಿ ಉತ್ತರ ಕೊಟ್ಟಿಲ್ಲ. ರೈತರ ಸಮಿತಿಯನ್ನೊಳಗೊಂಡ ನೀರು ಬಳಕೆದಾರರ ಸಂಘ ಅಲ್ಲ. ಆ ಕೆರೆಯ ಸಂಪೂರ್ಣ ಕಾಮಗಾರಿ ಅಭಿವೃದ್ಧಿ ಸಂಘವನ್ನು ಮಾಡಿ ಆರ್ಥಿಕವಾಗಿ ಅವರಿಗೆ ಶಕ್ತಿ ಕೊಡುವ ಮೂಲಕ ಆಗ ಕೆರೆಗಳನ್ನು ಅಬಾದು ಮಾಡಬಹುದು.

ಅಧ್ಯಕ್ಷರು : ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ಅವಕಾಶ ಕೊಡುತ್ತೇನೆ ಕೆರೆಗಳಿಗೆ ಸಂಬಂಧಪಟ್ಟಂತೆ ಸಂಪೂರ್ಣವಾಗಿ ಚರ್ಚೆ ಮಾಡಿ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನೆ) : ಮಾನ್ಯ ಅಧ್ಯಕ್ಷರೆ, ದಿನಾಂಕ : 27.01.2014 ರ ಎರಡನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 229 ಪಶ್ನೆಗಳ ಪೈಕಿ 175 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು. ಈಗ ಚುನಾವಣಾ ಪ್ರಸ್ತಾವ (ಅನುಬಂಧ–1)

4. ಚುನಾವಣಾ ಪ್ರಸ್ತಾವ

ವಿಷಯ: ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಪ್ರಶಾಸನ ಸಭೆಗೆ ಒಬ್ಬರು ಸದಸ್ಯರನ್ನು ಚುನಾಯಿಸುವ ಬಗ್ಗೆ.